ಅನುದಾನ ಪಡೆಯುತ್ತಿರುವ ಪ್ರೌಢ ಶಾಲೆಗಳಲ್ಲಿ ಸಂಗೀತ ಉಪಾಧ್ಯಾಯರನ್ನು ನೇಮಿಸಲು ಸಾರ್ವಜನಿಕರಿಂದ ಮನವಿಗಳು ಬಂದಿವೆಯೇ.

ಆ ಹಾಗಿದ್ದಲ್ಲಿ ಸರ್ಕಾರದವರು ಅವರನ್ನು ನೇಮಿಸಲು ಯಾವ ಕ್ರಮ ಕೈಗೊಂಡಿರುವರು?

ಇ ಈ ಸಂಗೀತ ಉಪಾಧ್ಯಾಯರುಗಳನ್ನು ನೇಮಿಸುವುದರಿಂದ ಸರ್ಕಾರದ ಮೇಲೆ ಎಷ್ಟು ಆರ್ಥಿಕ ಭಾರ ಬೀಳುವುದು.

ಈ ಎಷ್ಟು ಜನ ಸಂಗೀತ ಉಪಾಧ್ಯಾಯರುಗಳು ಬೇಕಾಗುವರು?

ಶ್ರೀ ಎಂ.ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)-

ಆ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಆಂಧ್ರ ಶಿಕ್ಷಕರ ಸಂಘದಿಂದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಸಂಗೀತ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವಂತೆ ಮನವಿ ಬಂದಿದೆ.

ಸರ್ಕಾರಿ ಪ್ರೌಢ ಶಾಲೆಗಳಿಗೆ ಮನವಿ ಬಂದಿಲ್ಲ.

ಆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ದಿನಾಂಕ 31-5-91 ರಲ್ಲಿದ್ದಂತೆ 19 ಹುದ್ದೆಗಳು ಖಾಲಿ ಇರುತ್ತದೆ. ಈ ಸಂಗೀತ ಶಿಕ್ಷಕರ ಹುದ್ದೆಗಳಿಗೆ ಸರ್ಕಾರಿ ಆದೇಶ ಸಂಖ್ಯೆ ಇಡಿ ಪಿ.ಎಂ.ಎಸ್ 131:91 ರಲ್ಲಿ ದಿನಾಂಕ 8-11-91 ಹಾಗೂ 27-2-92 ರಲ್ಲಿ ಆರ್ಥಿಕ ಮಿತವ್ಯಯವನ್ನು ಸಡಿಲಿಸಿದ್ದು ತುಂಬಿಕೊಳ್ಳಲು ಅನುಮತಿ ನೀಡಿರುತ್ತದೆ. ನೇಮಕಾತಿಗೆ ಸರ್ಕಾರವು ತನ್ನ ಆದೇಶ ಸಂಖ್ಯೆ ಇಡಿ: ಪಿ. ಎಂ. ಎಸ್ 88:91 ದಿನಾಂಕ 21 - 10 - 91 ರಲ್ಲಿ ನಿಯಮಾವಳಿಗಳನ್ನು ರೂಪಿಸಿದ್ದು ಅದರಂತೆ ನೇಮಕಾತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಉದ್ಭವಿಸುವುದಿಲ್ಲ

ಇ ಈಗ ಖಾಲಿ ಇರುವ 19ಜನ ಸಂಗೀತ ಶಿಕ್ಷಕರನ್ನು ನೇಮಕಾತಿ ಮಾಡಿದ್ದಲ್ಲಿ ಅಂದಾಜು ರೂ.36,000-00ಗಳು ಮಾಸಿಕವಾಗಿ ಹಾಗೂ ರೂ.432,000-00ಗಳು ವಾರ್ಷಿಕ ಆರ್ಥಿಕ ಭಾರ ಬೀಳುವುದು.

ಉದ್ಭವಿಸುವುದಿಲ್ಲ.

ಈ 19 ಜನ ಸಂಗೀತ ಉಪಾಧ್ಯಾಯರು ಬೇಕಾಗುವರು.

ಉದ್ಭವಿಸುವುದಿಲ್ಲ

ವಿಷಯ: ಕಾನೂನು ಕಾಲೇಜುಗಳ ನಿರ್ಮಾಣ ಮತ್ತು ಅನುದಾನದ ಬಗ್ಗೆ

ಚುಕ್ಕೆ ರಹಿತ ಪ್ರಶ್ನೆ : 1544 (2227)

ಶ್ರೀ ಶಿವಾನಂದ. ಹೆಚ್. ಕೌಜಲಗಿ (ಬೈಲಹೊಂಗಲ):- ಮಾನ್ಯ ಶಿಕ್ಷಣ ಮತ್ತು ಸಂಸದೀಯ

ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ ರಾಜ್ಯದಲ್ಲಿ ಎಷ್ಟು ಕಾನೂನು ಕಾಲೇಜುಗಳು ಇರುತ್ತವೆ. ಅವುಗಳಲ್ಲಿ ಖಾಸಗಿ ಕಾಲೇಜುಗಳೆಷ್ಟು ಮತ್ತು ಸರ್ಕಾರಿ ಕಾಲೇಜುಗಳೆಷ್ಟು ? (ಯಾವ ಯಾವ ಸ್ಥಳದಲ್ಲಿ ಇರುತ್ತವೆ ಅವುಗಳ ವಿವರ ಕೊಡುವುದು)

ಆ ಅನುಧಾನ ಪಡೆಯುತ್ತಿರುವ ಖಾಸಗಿ ಕಾನೂನು ಕಾಲೇಜುಕಳೆಷ್ಟು?

ಇ ಅನುದಾನಕ್ಕೆ ಕಾಯುತ್ತಿರುವ ಉಳಿದ ಖಾಸಗಿ ಕಾನೂನು ಕಾಲೇಜುಗಳೆಷ್ಟು?

ಈ ಬೆಳಗಾವಿ ಜಿಲ್ಲೆ ಬೈಲಹೊಂಗಲ ನಗರದಲ್ಲಿ ಸರ್ಕಾರಿ ಕಾನೂನು ಕಾಲೇಜು ಸ್ಥಾಪಿಸಲು ಸಾರ್ವಜನಿಕರಿಂದ ಮನವಿಗಳು ಬಂದಿದೆಯೇ?

ಉ ಹಾಗಿದ್ದಲ್ಲಿ, ಬೈಲಹೊಂಗಲ ನಗರದಲ್ಲಿ ಕಾನೂನು ಕಾಲೇಜು ಸ್ಥಾಪಿಸಲು ಸರ್ಕಾರದವರು ಯಾ ಕ್ರಮ ಕೈಗೊಂಡಿರುವರು.

ಶ್ರೀ ಎಂ.ವೀರಪ್ಪ ಮೊಯಿಲಿ. (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)-

ಅ ಒಟ್ಟು 45 (ನಲವತ್ತೈದು)

ಸರ್ಕಾರಿ	1
ಖಾಸಗಿ	43
ಭಾವಿತ ವಿಶ್ವವಿದ್ಯಾಲಯ	1

ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.

ಆ 10 (ಹತ್ತು)

ಭಾರತದ ರಾಷ್ಟ್ರೀಯ ಕಾನೂನು ಶಾಲೆಯ ಭಾವಿತ ವಿಶ್ವವಿದ್ಯಾಲಯವಾಗಿರುವ ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ಕಾನೂನು ಕಾಲೇಜು ಸೇರಿವೆ.

ಇ 35 (ಮುವತ್ತೈದು)

ಈ ಇಲ್ಲ.

ಉ ಪ್ರಶ್ನೆ (ಈ)ನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಧಾನ ಸಭಾ ಸದಸ್ಯರಾದ ಶ್ರೀ ಶಿವಾನಂದ.ಹೆಚ್.ಕೌಜಲಗಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2227ಕ್ಕೆ ಅನುಬಂಧ

ಸರ್ಕಾರಿ ಕಾನೂನು ಕಾಲೇಜು:-

1. ಬೆಂಗಳೂರು ವಿಶ್ವವಿದ್ಯಾನಿಲಯದ ಕಾನೂನು ಕಾಲೇಜು, ಬೆಂಗಳೂರು.

ಭಾವಿತ ವಿಶ್ವವಿದ್ಯಾಲಯ :-

1. ಭಾರತ ರಾಷ್ಟ್ರೀಯ ಕಾನೂನು ಶಾಲೆ, ಭಾವಿತ ವಿಶ್ವವಿದ್ಯಾಲಯ, ಬೆಂಗಳೂರು.

ಖಾಸಗಿ ಅನುದಾನಿತ ಕಾನೂನು ಕಾಲೇಜುಗಳು:-

1. ಶಾರದ ವಿಲಾಸ್ ಕಾನೂನು ಕಾಲೇಜು, ಮೈಸೂರು-570004
2. ಎಸ್.ಕೃಷ್ಣಾ ಕಾನೂನು ಕಾಲೇಜು, ಹಾಸನ-573201
3. ನ್ಯಾಷನಲ್ ಕಾನೂನು ಕಾಲೇಜು, ಶಿವಮೊಗ್ಗ-577201
4. ಜೆಎಸ್ಎಸ್ ಸಕ್ರಿ ಕಾನೂನು ಕಾಲೇಜು, ಹುಬ್ಬಳ್ಳಿ
5. ಎಂಇಎಸ್ ಕಾನೂನು ಕಾಲೇಜು, ಶಿರಸಿ-581401
6. ಆರ್ಎಲ್ ಕಾನೂನು ಕಾಲೇಜು, ತಿಲಕವಾಡಿ, ಬೆಳಗಾಂ-590006

7. ಸೇಠ್ ಶಂಕರಲಾಲ್ ಲಾಹೋಠಿ ಕಾನೂನು ಕಾಲೇಜು, ಗುಲ್ಬರ್ಗ-585102
8. ಸಿದ್ಧಾರ್ಥ ಕಾನೂನು ಕಾಲೇಜು,ಗುಲ್ಬರ್ಗ

ಖಾಸಗಿ ಅನುದಾನರಹಿತ ಕಾನೂನು ಕಾಲೇಜುಗಳು:-

1. ಬಿಎಂಎಸ್ ಕಾನೂನು ಕಾಲೇಜು,ಬಸವನಗುಡಿ, ಬೆಂಗಳೂರು-560004
2. ಶ್ರಿ ಜಗದ್ಗುರು ರೇಣುಕಾಚಾರ್ಯ ಕಾನೂನು ಕಾಲೇಜು, ರೇಸ್‌ಕೋರ್ಸ್ ರೋಡ್, ಬೆಂಗಳೂರು-560009.
3. ವಿವಿ ಪುರಂ ಕಾನೂನು ಕಾಲೇಜು,ಬೆಂಗಳೂರು-560004
4. ಕೆಎಲ್ಇ ಸಂಘದ ಕಾನೂನು ಕಾಲೇಜು(ಸಂಜೆ),ರಾಜಾಜಿನಗರ, ಬೆಂಗಳೂರು-560010
5. ಎನ್‌ಆರ್‌ಎನ್‌ಆರ್‌ಸಿ ಕಾನೂನು ಕಾಲೇಜು, ಮಿಷನ್ ರಸ್ತೆ, ಬೆಂಗಳೂರು-560027
6. ದಯಾನಂದಸಾಗರ್ ಕಾನೂನು ಕಾಲೇಜು, ಜಯನಗರ, ಬೆಂಗಳೂರು-560011
7. ಇಸ್ಲಾಮಿಯಾ ಕಾನೂನು ಕಾಲೇಜು, ಬೆಂಗಳೂರು
8. ಶೇಷಾದ್ರಿಪುರಂ ಕಾನೂನು ಕಾಲೇಜು , ಶೇಷಾದ್ರಿಪುರಂ,ಬೆಂಗಳೂರು-560020
9. ಸ್ವಾಮಿ ವಿವೇಕಾನಂದ ಕಾನೂನು ಕಾಲೇಜು, ರಾಜಾಜಿನಗರ, ಬೆಂಗಳೂರು-560010
10. ಬೇಸಿಕ್ ಎಜುಕೇಷನ್ ಸೊಸೈಟಿಯ ರಾಂ ಮನೋಹರ ಲೋಹಿಯಾ ಕಾನೂನು ಕಾಲೇಜು, ಧರ್ಮರಾಜ ದೇವಸ್ಥಾನ ರಸ್ತೆ, ಬೆಂಗಳೂರು-560052
11. ಅರುಂಡತಿ ಎಜುಕೇಷನ್ ಟ್ರಸ್ಟ್ ಕಾನೂನು ಕಾಲೇಜು, ಯಲಹಂಕ, ಬೆಂಗಳೂರು
12. ವಿದ್ಯೋದಯ ಕಾನೂನು ಕಾಲೇಜು, ತುಮಕೂರು-572101
13. ಗೋಲ್ಡನ್‌ವ್ಯಾಲಿ ಎಜುಕೇಷನ್ ಟ್ರಸ್ಟ್ ಕಾನೂನು ಕಾಲೇಜು,ಕೆಜಿಎಫ್-563121, ಬಂಗಾರಪೇಟೆ ತಾಲ್ಲೂಕು
14. ವಿದ್ಯಾವರ್ಧಕ ಕಾನೂನು ಕಾಲೇಜು, ಶೇಷಾದ್ರಿ ಅಯ್ಯರ್ ರಸ್ತೆ, ಮೈಸೂರು-570009
15. ಜೆಎಸ್‌ಎಸ್ ಕಾನೂನು ಕಾಲೇಜು, ಮೈಸೂರು-570004
16. ಹೊಂಬೇಗೌಡ ಸ್ಮಾರಕ ಕಾನೂನು ಕಾಲೇಜು, ಮಂಡ್ಯ-571401
17. ಜನತ ಎಜುಕೇಷನ್ ಸೊಸೈಟಿಯ ಕಾನೂನು ಕಾಲೇಜು, ಮಂಡ್ಯ-571401
18. ಗೋಪಿ ಕಾನೂನು ಕಾಲೇಜು, ಅರಸೀಕೆರೆ-583125
19. ಸರಸ್ವತಿ ಕಾನೂನು ಕಾಲೇಜು, ಚಿತ್ರದುರ್ಗ577501
20. ಆರ್‌ಎಲ್ ಕಾನೂನು ಕಾಲೇಜು, ದಾವಣಗೆರೆ-577002
21. ಧರ್ಮಸ್ಥಳ ಮಂಜುನಾಥೇಶ್ವರ ಕಾನೂನು ಕಾಲೇಜು, ಮಂಗಳೂರು
22. ಉಡುಪಿ ಕಾನೂನು ಕಾಲೇಜು, ಉಡುಪಿ-576101
23. ವಿವೇಕಾನಂದ ಕಾನೂನು ಕಾಲೇಜು, ಪುತ್ತೂರು
24. ಕೆಪಿಇ ಸಂಜೆ ಕಾನೂನು ಕಾಲೇಜು , ಧಾರವಾಡ
25. ಕೆಎಲ್ಇಎಸ್‌ಎ ಮಾನ್ವಿ ಕಾನೂನು ಕಾಲೇಜು, ಗದಗ್-582101
26. ಕೆಎಲ್ಇ ಗುರುಸಿದ್ದೇಶ್ವರ ಕೊತ್ತಂಬರಿ ಸಂಜೆ ಕಾನೂನು ಕಾಲೇಜು, ಹುಬ್ಬಳ್ಳಿ-580031
27. ಹುರಿಕಟ್ಲೆ ಅಜ್ಜ ಸಂಜೆ ಕಾನೂನು ಕಾಲೇಜು, ಧಾರವಾಡ
28. ರಾಣಿಬೆನ್ನೂರು ತಾಲ್ಲೂಕು ಎಜುಕೇಷನ್ ಸೊಸೈಟಿಯ ಕಾನೂನು ಕಾಲೇಜು, ರಾಣಿಬೆನ್ನೂರು.
29. ಅಂಜುಮಾನ್ "ಎ"ಇಸ್ಲಾಮಿಕ್ ಕಾನೂನು ಕಾಲೇಜು, ಬಿಜಾಪುರ

30. ಬಸವೇಶ್ವರ ವಿದ್ಯಾವರ್ಧಕ ಸಂಘದ ಕಾನೂನು ಕಾಲೇಜು , ಬಾಗಲಕೊಟೆ
31. ಬಿವಿ ಬೆಲ್ಲದ ಕಾನೂನು ಕಾಲೇಜು, ಬೆಳಗಾಂ-590001
32. ಕೆಎಲ್ಇ ಸಂಜೆ ಕಾನೂನು ಕಾಲೇಜು, ಬೆಳಗಾಂ.
33. ಕೆಆರ್ಇಎಸ್ ಕಾನೂನು ಕಾಲೇಜು, ಬೀದರ್-585401
34. ಎಸ್ಸಿಬಿ ಕಾನೂನು ಕಾಲೇಜು, ರಾಯಚೂರು-584101
35. ವುಂಕಿಸಣ್ಣ ರುದ್ದಪ್ಪ ಕಾನೂನು ಕಾಲೇಜು, ಬಳ್ಳಾರಿ.

ವಿಷಯ: ಬೈಲಹೊಂಗಲ ಕ್ಷೇತ್ರದ ಕೆಲವು ಹಳ್ಳಿಗಳಿಗೆ ವಿದ್ಯುತ್ ಸೌಕರ್ಯ ಒದಗಿಸುವ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1545 (2228)

ಶ್ರೀ ಶಿವಾನಂದ. ಹೆಚ್. ಕೌಜಲಗಿ (ಬೈಲಹೊಂಗಲ):- ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕು ರುದ್ರಾಪುರ ಮತ್ತು ತಾಂಡಾ ಹಾಗೂ ಬೈಲಹೊಂಗಲ ತಾಲ್ಲೂಕು ಲಿಂಗದಹಳ್ಳಿ ಗ್ರಾಮಗಳಿಗೆ ವಿದ್ಯುತ್ ಸೌಕರ್ಯ ಇಲ್ಲದೆ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ ಹಾಗಿದ್ದಲ್ಲಿ ಈ ಗ್ರಾಮಕ್ಕೆ ವಿದ್ಯುತ್ ಸೌಕರ್ಯ ಒದಗಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ.

ಇ ಈ ಗ್ರಾಮದಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಜನರು ವಾಸಿಸುತ್ತಿದ್ದು ಇದುವರೆವಿಗೂ ವಿದ್ಯುತ್ ಸೌಕರ್ಯ ಒದಗಿಸದಿರಲು ಕಾರಣವೇನು?

ಶ್ರೀ ಎಂ. ರಾಮಪ್ಪ,(ಇಂಧನ ರಾಜ್ಯ ಮಂತ್ರಿಗಳು)

ಅ ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ರುದ್ರಾಪುರವನ್ನು ವಿದ್ಯದೀಕರಿಸಲಾಗಿದೆ. ಈ ಗ್ರಾಮಕ್ಕೆ ಸೇರಿರುವ ತಾಂಡಾವನ್ನು ವಿದ್ಯುದೀಕರಿಸಬೇಕಾಗಿದೆ. ಬೈಲಹೊಂಗಲ ತಾಲ್ಲೂಕಿನ ಲಿಂಗದಹಳ್ಳಿಯನ್ನು ಈ ಮುಂಚೆಯೇ ವಿದ್ಯುದೀಕರಿಸಲಾಗಿತ್ತು. ಆದರೆ ನಂತರ ಸದರೀ ಗ್ರಾಮವು ಪುನರ್ವಸತಿ ಗೊಂಡಿರುವುದರಿಂದ ಪುನರ್ ವಿದ್ಯುದೀಕರಣವಾಗಬೇಕಾಗಿದೆ.

ಆ ರುದ್ರಾಪುರ ಗ್ರಾಮಕ್ಕೆ ಸೇರಿದ ತಾಂಡಾವನ್ನು ವಿದ್ಯುದೀಕರಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಲಿಂಗದಹಳ್ಳಿ ಗ್ರಾಮವನ್ನು ವಿದ್ಯದೀಕರಿಸಲು ನೀರಾವರಿ ಇಲಾಖೆಯು ವಿದ್ಯುದೀಕರಣದ ವೆಚ್ಚವನ್ನು ನೀಡಬೇಕಾಗಿದೆ.

ಇ ಈ ಮುಂಚೆ ರುದ್ರಾಪುರ ತಾಂಡಾಕ್ಕೆ ವಿದ್ಯುತ್ ಒದಗಿಸಲು ಸುಮಾರು ೨ ಲಕ್ಷಕ್ಕೂ ಹೆಚ್ಚಿನ ವೆಚ್ಚ ಮಾಡಬೇಕಾಗಿತ್ತು. ಆದ್ದರಿಂದ ವಿದ್ಯುದೀಕರಣವು ವಿಳಂಬವಾಯಿತು. ಈಗ ಇಲ್ಲಿ ಎರಡು ಕುಡಿಯುವ ನೀರಿನ ಯೋಜನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗುತ್ತಿರುವುದರಿಂದ, ಸದರಿ ತಾಂಡಾದ ವಿದ್ಯುದೀಕರಣಕ್ಕೆ ತಗಲುವ ವೆಚ್ಚ ಕಡಿಮೆಯಾಗಿರುವುದರಿಂದ, ವಿದ್ಯುದೀಕರಣಕ್ಕಾಗಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಲಿಂಗದಹಳ್ಳಿ ಪುನರ್ವಸತಿ ಕೇಂದ್ರದ ವಿದ್ಯುದೀಕರಣಕ್ಕೆ ಸಂಬಂಧಿಸಿದ ನೀರಾವರಿ ಇಲಾಖೆಯವರು ತಗಲುವ ವೆಚ್ಚವನ್ನು ನೀಡದೇ ಇರುವುದರಿಂದ, ವಿದ್ಯುದೀಕರಣಕ್ಕೆ ಕ್ರಮ ಕೈಗೊಳ್ಳಲಾಗಿಲ್ಲ.

ವಿಷಯ: ಬೆಳಗಾವಿ ಜಿಲ್ಲೆಯಲ್ಲಿ ಬಸ್ ಸೌಕರ್ಯ ಒದಗಿಸುವುದರ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1546 (2229)

ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.